ಇಂದು ದಿನಾಂಕ *04.03.2020* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರಿದ ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಕೆ ಎಂ ವಕೀಲರಿಂದಃ

2010 ರಲ್ಲಿ ಆಡಿಟ್ ನವರು ನೀಡಿರುವ ವರದಿಯಲ್ಲಿ ಆರೋಪಿತನು ನೀಡಿರುವ ಮಾಹಿತಿ ಕ್ರಮಬದ್ಧವಾಗಿಲ್ಲವೆಂದು ನಮೂದಾಗಿರುತ್ತದೆ. ಆಡಿಟ್ ವರದಿಗೆ ಮಾಹಿತಿಯನ್ನು ಆರೋಪಿತಯಾದ ದೊಡ್ಡಣ್ಣನೇ ಕೊಡಬೇಕು ಎಂಬ ಕೆಲಸವನ್ನು ಆರೋಪಿಗೆ ವಹಿಸಿದ ಬಗ್ಗೆ ಯಾವುದಾದರೂ ದಾಖಲಾತಿ ಇದೆಯೇ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ದಾಖಲೆ ಇಲ್ಲ ಎಂದು ನುಡಿದು ಆದರೆ ಆರಂಭದಿಂದಲೂ ಶಾಲೆಯನ್ನು ಆರೋಪಿಯೇ ನಿರ್ವಹಣೆ ಮಾಡುತ್ತಿದ್ದರಿಂದ ಆರೋಪಿಯೇ ದಾಖಲಾತಿಗಳನ್ನು ಕೊಡಬೇಕಾಗಿದ್ದುದು ಆರೋಪಿಯ ಕರ್ತವ್ಯವಾಗಿತ್ತು ಎಂದು ನುಡಿಯುತ್ತಾರೆ. ಆರೋಪಿಯೇ ಆರಂಭದಿಂದಲೂ ಶಾಲೆಯನ್ನು ನಿರ್ವಹಣೆ ಮಾಡಬೇಕೆಂದು ಆರೋಪಿಗೆ ವಹಿಸಿದ ಬಗ್ಗೆ ದಾಖಲಾತಿ ಇಲ್ಲ. ಆರೋಪಿಯು ಉಳಿದ ಧರ್ಮ ದರ್ಶಿಗಳಂತೆಯೇ ಅವರೂ ಸಹ ಒಬ್ಬ ಧರ್ಮದರ್ಶಿಯಾಗಿದ್ದರು ಎಂದರೆ ಸರಿ. ಹಣಕಾಸಿನ ವ್ಯವಹಾರದ ಬಗ್ಗೆ ನನ್ನ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆಯಲಾಗಿದೆ ಎಂದರೆ ಸರಿ. ಸದರಿ ನನ್ನ ಬ್ಯಾಂಕ್ ಜಂಟಿ ಖಾತೆ ಬೈಲಕುಪ್ಪೆಯ ಸಿಂಡಿಕೇಟ್ ಬ್ಯಾಂಕ್ ನಲ್ಲಿ ತೆರೆಯಲಾಗಿದೆ. ಸದರಿ ಬ್ಯಾಂಕ್ ಜಂಟಿ ಖಾತೆಗೆ ಆರೋಪಿ ಸೇರಿಲ್ಲ ಎಂದರೆ ಸರಿ. ಆಡಿಟ್ ವರದಿ ಪಡೆಯುವುದು ಸಂಸ್ಥೆಯ ಹಣಕಾಸಿನ ವ್ಯವಹಾರಗಳ ಬಗ್ಗೆ ಮಾತ್ರ ಎಂದರೆ ಸರಿ

ಆಡಿಟ್ ವರದಿ ಪಡೆದುಕೊಳ್ಳಲು ಮಾಹಿತಿಯನ್ನು ನಾನೇ ಕೊಡಬೇಕಾಗಿತ್ತು ಎಂದರೆ ಸರಿಯಲ್ಲ. ಆಡಿಟ್ ವರದಿ ಪಡೆದುಕೊಳ್ಳಲು ನಾನು ಮಾಹಿತಿ ಕೊಡಬೇಕಾಗಿರಲಿಲ್ಲ ಆರೋಪಿಯೇ ಕೊಡಬೇಕಾಗಿತ್ತು ಎಂಬ ಬಗ್ಗೆ ದಾಖಲಾತಿ ಇಲ್ಲ. ಮಿಳಿಂದ ವಿದ್ಯಾ ಸಂಸ್ಥೆಯ ಹಣಕಾಸಿನ ವ್ಯವಹಾರಗಳು ನಾನು ಬ್ಯಾಂಕ್ ಖಾತೆ ಹೊಂದಿರುವ ಕಾರಣ ನನ್ನ ಬಳಿಯೇ ಇರುವುದು ಎಂದರೆ ಸರಿಯಲ್ಲ. ಮಿಳಿಂದ ವಿದ್ಯಾ ಸಂಸ್ಥೆಯ ಹಣಕಾಸಿನ ವ್ಯವಹಾರಗಳ ಬಗ್ಗೆ ನೀವು ಆರೋಪಿಗೆ ಮಾಹಿತಿಯನ್ನು ಎಂದಾದರೂ ನೀಡಿದ್ದೀರಾ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಬಳಿ ಇದ್ದ ಮಾಹಿತಿಯನ್ನು ಆರೋಪಿಗೆ ಕೊಟ್ಟಿರುತ್ತೇನೆಂದು ನುಡಿದಿರುತ್ತಾರೆ. ಯಾವ ತಾರೀಖು ತಿಂಗಳು ಮತ್ತು ಇಸವಿಯಲ್ಲಿ ಆ ರೀತಿ ಮಾಹಿತಿಯನ್ನು ನೀಡಿದ್ದೀರಿ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲವೆಂದು ನುಡಿದಿರುತ್ತಾರೆ. ಆರೋಪಿಗೆ ನಾನು ಆ ರೀತಿ ಮಾಹಿತಿ ಕೊಟ್ಟ ಬಗ್ಗೆ ದಾಖಲಾತಿ ಇಲ್ಲ.

ವಕೀಲರು ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಏಳು ಸಾವಿರ ರೂಪಾಯಿ ಹಣವನ್ನು ಮಿಳಿಂದ ವಿದ್ಯಾ ಸಂಸ್ಥೆಗೆ ಬಿಡುಗಡೆ ಮಾಡಬೇಕೆಂದು ಮೈಸೂರು ಜಿಲ್ಲಾ ಪರಿಷತ್ ಮಾಡಿರುವ ಆದೇಶವಾಗಿರುತ್ತದೆ ಎಂದು ಮಾಡಿದ ಸಲಹೆಗೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿದ್ದು ಸದರಿ ದಾಖಲಾತಿಯನ್ನು ನಿಡಿ೨ ಎಂದು ಗುರುತಿಸಲಾಯಿತು. ಸದರಿ ಏಳು ಸಾವಿರ ರೂಪಾಯಿ ಹಣವನ್ನು

04.03.20

ನಿಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿದ್ದೀರಿ ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ಜಮಾ ಆಗಿದೆ ಆರೋಪಿ ತೆಗೆದುಕೊಂಡು ಹೋಗಿದ್ದಾರೆಂದು ನುಡಿದಿರುತ್ತಾರೆ. ಸದರಿ ಏಳು ಸಾವಿರ ರೂಪಾಯಿ ಮಿಳಿಂದ ವಿದ್ಯಾ ಸಂಸ್ಥೆಗೆ ಜಮಾ ಆಗಿದೆ ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ಆದರೆ ಸದರಿ ಹಣವನ್ನು ಆರೋಪಿಯು ನನ್ನಿಂದ ಸದರಿ ಹಣವನ್ನು ಡ್ರಾ ಮಾಡಿಸಿಕೊಂಡು ಆರೋಪಿಯೇ ತೆಗೆದುಕೊಂಡು ಹೋಗಿರುತ್ತಾರೆಂದು ನುಡಿದಿರುತ್ತಾರೆ. ಯಾವ ತಾರೀಖು ಮತ್ತು ತಿಂಗಳು ಸದರಿ ಏಳು ಸಾವಿರ ರೂಪಾಯಿ ಹಣವನ್ನು ಆರೋಪಿ ನನ್ನಿಂದ ಡ್ರಾ ಮಾಡಿಸಿಕೊಂಡು ಹೋದರು ಎಂದು ನಿಖರವಾಗಿ ಗೊತ್ತಿಲ್ಲ ಆದರೆ 1992 ರಲ್ಲಿ ಡ್ರಾ ಮಾಡಿಸಿಕೊಂಡು ಹೋದರು ಎಂದು ನುಡಿದಿರುತ್ತಾರೆ. ಆರೋಪಿಗೆ ನಾನು ಏಳು ಸಾವಿರ ರೂಪಾಯಿ ಹಣ ಡ್ರಾ ಮಾಡಿ ಕೊಟ್ಟ ಬಗ್ಗೆ ನನ್ನ ಬಳಿ ದಾಖಲಾತಿ ಇಲ್ಲ. ಆರೋಪಿಯು ನನ್ನಿಂದ ಏಳು ಸಾವಿರ ರೂಪಾಯಿ ಹಣವನ್ನು ಡ್ರಾ ಮಾಡಿಸಿಕೊಂಡು ಹೋಗಿ ದುರುಪಯೋಗಪಡಿಸಿಕೊಂಡಿದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿಯನ್ನು ಮಿಳಿಂದ ವಿದ್ಯಾ ಸಂಸ್ಥೆಯ ಧರ್ಮದರ್ಶಿ ಸ್ಥಾನದಿಂದ ತೆಗೆದುಹಾಕಿದ ನಂತರ ಪಿರಿಯಾಪಟ್ಟಣದ ಅಣ್ಣಯ್ಯ ಎಂಬುವರನ್ನು ಧರ್ಮದರ್ಶಿಯಾಗಿ ನೇಮಕ ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಮತ್ತಿಬ್ಬರನ್ನೂ ಸಹ ಧರ್ಮದರ್ಶಿಯಾಗಿ ನೇಮಕ ಮಾಡಲಾಗಿದೆ ಎಂದು ಸ್ವಯಂ ನುಡಿದಿರುತ್ತಾರೆ. ಆರೋಪಿಯು ನಿವೃತ್ತಿಯಾಗುವ ಕಾಲದಲ್ಲಿ ಮೈಸೂರಿನ ಮಹಾರಾಣಿ ಡಿ.ಎಡ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. ಆರೋಪಿಯು ಫೆಬ್ರವರಿ 2017 ರಲ್ಲಿ ಸೇವೆಯಿಂದ ನಿವೃತ್ತರಾದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯುವಂತೆ ಶಿಕ್ಷಣ ಇಲಾಖೆಗೆ ಹಾಗೂ ಮಹಾಲೇಖಪಾಲಕರಿಗೆ ಅಣ್ಣಯ್ಯನವರ ಮೂಲಕ ಅರ್ಜಿ ಕೊಡಿಸಲಾಗಿದೆ ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ಕಾರ್ಯದರ್ಶಿಯಾಗಿ ಅಣ್ಣಯ್ಯನವರೇ ಅರ್ಜಿ ಕೊಟ್ಟಿರುತ್ತಾರೆಂದು ನುಡಿದಿರುತ್ತಾರೆ. ಅಣ್ಣಯ್ಯನವರು ಈ ಪ್ರಕರಣ ಅಂದರೆ ಸಿಸಿ ಸಂಖ್ಯೆ 13/2017 ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ ಎಂಬ ಕಾರಣದಿಂದ ನಿವೃತ್ತಿ ಸೌಲಭ್ಯ ತಡೆ ಹಿಡಿಯುವಂತೆ ಅರ್ಜಿ ಕೊಟ್ಟಿರುತ್ತಾರೆ ಎಂದರೆ ಸರಿ. ಅಣ್ಣಯ್ಯನವರ ಮುಖಾಂತರ ಈ ಸುಳ್ಳು ದೂರನ್ನು ನಾನೇ ಕೊಡಿಸಿದ್ದೇನೆಂದರೆ ಸರಿಯಲ್ಲ. ಅಣ್ಣಯ್ಯನವರು ಆ ರೀತಿ ದೂರು ಕೊಡಲು ಠರಾವು ಪಾಸು ಆಗಿದೆ. ಯಾವ ತಾರೀಖು ತಿಂಗಳು ಮತ್ತು ಇಸವಿಯಲ್ಲಿ ಠರಾವು ಪಾಸು ಮಾಡಲಾಗಿದೆ ಎಂದು ನೆನಪಿಲ್ಲ. ಠರಾವಿನ ದಾಖಲಾತಿಗಳು ಕಾರ್ಯದರ್ಶಿಯಾದ ಅಣ್ಣಯ್ಯನ ಸುಪರ್ದಿನಲ್ಲಿವೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಮಾಡಲು ತೊಂದರೆ ಇಲ್ಲ. ಆ ರೀತಿ ಯಾವುದೇ ಠರಾವು ಪಾಸು ಆಗಿಲ್ಲ ಎಂದರೆ ಸರಿಯಲ್ಲ. ದುರುದ್ದೇಶದಿಂದ ಅಣ್ಣಯ್ಯನ ಮೂಲಕ ಸುಳ್ಳು ದೂರು ಕೊಡಿಸಿದ್ದೇನೆಂದರೆ ಸರಿಯಲ್ಲ.

04.03.20

ಮಿಳಿಂದ ವಿದ್ಯಾ ಸಂಸ್ಥೆಯ ಜಾಗದಲ್ಲಿ ಬೆಳೆದ ಹಣ್ಣಿನ ಪಸಲು ಮತ್ತು ಬೆಳೆಗಳ ಪಸಲುಗಳನ್ನು ಆರೋಪಿಯು ದುರುಪಯೋಗಪಡಿಸಿಕೊಂಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮಿಳಿಂದ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳಿಗೆ ನಿಖರವಾದ ಸಮವಸ್ತ್ರ ಮತ್ತು ಪಾದರಕ್ಷೆಗಳನ್ನು ಧರಿಸಬೇಕೆಂಬ ನಿಯಮ ಮಾಡಿಕೊಳ್ಳಲಾಗಿದೆ ಎಂದರೆ ಸರಿ. ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಾಗೂ ಪಾದರಕ್ಷೆಗಳನ್ನು ಶಾಲೆಯೇ ಒದಗಿಸುತ್ತದೆ. ಸಾಕ್ಷಿಯು ಮುಂದುವರಿದು ಸಮವಸ್ತ್ರ ಮತ್ತು ಪಾದರಕ್ಷೆಗಳ ಕನಿಷ್ಠ ಬೆಲೆಯನ್ನು ಪೋಷಕರಿಂದ ಪಡೆಯಲಾಗುತ್ತದೆ ಎಂದು ಸ್ವಯಂ ನುಡಿಯುತ್ತಾರೆ. ಸಮವಸ್ತ್ರ ಮತ್ತು ಪಾದರಕ್ಷೆಗಳ ಶುಲ್ಕವನ್ನು ಸಂಗ್ರಹಿಸುವ ಹಾಗೂ ನಿರ್ವಹಿಸುವ ಜವಾಬಾದರಿಯನ್ನು ಆಶಾ ಎಂಬ ಶಿಕ್ಷಕಿ ನಿರ್ವಹಿಸುತ್ತಿದ್ದರು. ಸದರಿ ಜವಾಬ್ದಾರಿಯನ್ನು ಆಶಾರವರು 2009 ರಿಂದ ನಿರ್ವಹಿಸುತ್ತಿದ್ದಾರೆ. 2009 ಕ್ಕಿಂತ ಪೂರ್ವದಲ್ಲಿ ಸದರಿ ಜವಾಬ್ದಾರಿಯನ್ನು ಯಾರು ನಿರ್ವಹಿಸುತ್ತಿದ್ದರು ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆ ಸಮಯದಲ್ಲಿ ಶಾಲೆಯ ನಿರ್ವಹಣೆಯನ್ನು ಆರೋಪಿಯೇ ಮಾಡುತ್ತಿದ್ದರಿಂದ ಸದರಿ ವಿಚಾರ ಆರೋಪಿಗೇ ಗೊತ್ತಿತ್ತು ಎಂದು ನುಡಿದಿರುತ್ತಾರೆ. 1992 ರಿಂದ 2009 ರ ವರೆಗೆ ಸಮವಸ್ತ್ರ ಮತ್ತು ಪಾದರಕ್ಷೆಗಳ ಶುಲ್ಕ ಸಂಗ್ರಹಣೆ ಮತ್ತು ನಿರ್ವಹಣೆ ಜವಾಬ್ದಾರಿಯನ್ನು ಯಾರು ನಿರ್ವಹಿಸುತ್ತಿದ್ದರು ಎಂದು ನೀವು ಕೇಳಿ ತಿಳಿದುಕೊಂಡಿಲ್ಲವೇ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಪೂರ್ಣ ಜವಾಬ್ದಾರಿಯನ್ನು ಆರೋಪಿಯೇ ಮಾಡುತ್ತಿದ್ದರಿಂದ ಆರೋಪಿಗೇ ಗೊತ್ತು ಎಂದು ನುಡಿದಿರುತ್ತಾರೆ. 1992 ರಿಂದಲೂ ವಿದ್ಯಾರ್ಥಿಗಳ ಸಮವಸ್ತ್ರ ಮತ್ತು ಪಾದರಕ್ಷೆಗಳ ಹಣಕಾಸಿನ ವ್ಯವಹಾರವನ್ನು ಆಯಾ ತರಗತಿಯ ಕ್ಲಾಸ್ ಟೀಚರ್ ಗಳೇ ನಿರ್ವಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಯಾ ತರಗತಿಯ ಕ್ಲಾಸ್ ಟೀಚರ್ ಗಳು ವಿದ್ಯಾರ್ಥಿಗಳಿಗೆ ಸಮವಸ್ತ್ರ ಮತ್ತು ಪಾದರಕ್ಷೆಗಳನ್ನು ಒದಗಿಸುವ ಸಮಯದಲ್ಲಿ ಧರ್ಮದರ್ಶಿಗಳ ಸಹಾಯ ಪಡೆದುಕೊಳ್ಳುತ್ತಿದ್ದರು ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ಆಯಾ ತರಗತಿಯ ಕ್ಲಾಸ್ ಟೀಚರ್ ಗಳು ಸಮವಸ್ತ್ರ ಹಾಗೂ ಪಾದರಕ್ಷೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ಸಮಯದಲ್ಲಿ ಆರೋಪಿಯ ಸಹಾಯವನ್ನು ಸಹ ಪಡೆದುಕೊಳ್ಳುತ್ತಿದ್ದರು ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ.

ನಿಪಿ.42 ರ ಒಂದು ಹಾಳೆಯನ್ನು ವಕೀಲರು ಸಾಕ್ಷಿಗೆ ತೋರಿಸಿ ಸದರಿ ದಾಖಲೆಯು ಕ್ಲಾಸ್ ಟೀಚರ್ ಗಳು ಆರೋಪಿಗೆ ಹಣವನ್ನು ಪಾವತಿ ಮಾಡಿದ ವಿವರವಾಗಿರುತ್ತದೆ ಎಂದು ವಕೀರು ಮಾಡಿದ ಸಲಹೆಗೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ಸದರಿ ಹಾಳೆಯು ಕ್ಲಾಸ್ ಟೀಚರ್ ಗಳು ಸಮವಸ್ತ್ರ ಮತ್ತು ಪಾದರಕ್ಷೆಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವ ಸಮಯದಲ್ಲಿ ಆರೋಪಿಯು ಸದರಿ ಸಮವಸ್ತ್ರ ಹಾಗೂ ಪಾದರಕ್ಷೆಗಳನ್ನು ಕ್ಲಾಸ್ ಟೀಚರ್ ಗಳಿಗೆ ತಂದು ಕೊಟ್ಟಿದ್ದಕ್ಕೆ ಅದರ ಬೆಲೆಯ ಹಣವನ್ನು ಆರೋಪಿಯು ಕ್ಲಾಸ್ ಟೀಚರ್ ಗಳಿಂದ ವಾಪಸ್ ಪಡೆದುಕೊಂಡ ಬಗೆಗಿನ ಲೆಕ್ಕದ ವಿವರವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ದಾಖಲೆಯು

04.03.20

ಆರೋಪಿಯು 1999 ರಿಂದ 2004 ರವರೆಗೆ ಪ್ರತಿನಿತ್ಯ ಸಂಗ್ರಹವಾದ ಫೀಸಿನ ಹಣವನ್ನು ಶಿಕ್ಷಕರಿಂದ ಪ್ರತಿನಿತ್ಯ ಆರೋಪಿಯು ಸಂಗ್ರಹ ಮಾಡುತ್ತಿದ್ದ ದಾಖಲೆಯಾಗಿದೆ ಎಂದು ಸ್ವಯಂ ನುಡಿದಿರುತ್ತಾರೆ. ಸದರಿ ಹಾಳೆಯು ದಿನಾಂಕ 05.06.2000 ರಿಂದ 03.08.2000 ರ ಅವಧಿಗೆ ಸಂಬಂದಪಟ್ಟಿರುತ್ತದೆ ಎಂದರೆ ಸರಿ. ಅದೇ ಹಾಳೆಯ ಹಿಂಭಾಗದಲ್ಲಿ 04.09.2000 ರಿಂದ 10.04.2001 ರ ಅವಧಿಗೆ ಲೆಕ್ಕ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಆರೋಪಿಯು ಶಾಲೆಯಿಂದ ಮಾಸಿಕ ಫೀಯನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ನಮೂದಾಗಿಲ್ಲವೆಂದರೆ ಸರಿ. ಸಾಕ್ಷಿಯು ಮುಂದುವರಿದು ಆದರೆ ನಿವೃತ್ತ ಜಿಲ್ಲಾ ನ್ಯಾಯಾಧೀಶರ ಮುಂದೆ ಆರೋಪಿಯು ಫೀ ಸಂಗ್ರಹಿಸಿದ ಹಣವನ್ನು ಪಡೆದುಕೊಂಡು ಹೋಗಿರುವ ಬಗ್ಗೆ ಶಿಕ್ಷಕರು ಹೇಳಿಕೆಗಳನ್ನು ನೀಡಿರುತ್ತಾರೆಂದು ಸ್ವಯಂ ನುಡಿದಿರುತ್ತಾರೆ. ಸದರಿ ಹಾಳೆಯಲ್ಲಿರುವ ಅಂಶಗಳನ್ನು ಜಲಜಾಕ್ಷಿ ಎಂಬ ಶಿಕ್ಷಕಿ ಬರೆದಿರುತ್ತಾರೆ. ಸದರಿ ಹಾಳೆ ನೋಡುತ್ತಿದ್ದು ಅದರಲ್ಲಿ ನಮೂದಾಗಿರುವ 78,735+4000 ರೂ ಹಣವನ್ನು ಆರೋಪಿಯು ಪಡೆದಿರುತ್ತಾರೆ ಎಂದು ಅರ್ಥೈಸಬಹುದು. ಆರೋಪಿಯು ರಾಜಶೇಖರ ಎಂಬ ಶಿಕ್ಷಕರಿಂದಲೂ ಸಹ ಫೀ ಹಣವನ್ನು ಪಡೆದುಕೊಂಡು ಹೋಗುತ್ತಿದ್ದರು. ಆರೋಪಿಯು ಸದರಿ ಫೀ ಹಣವನ್ನು ಪಡೆದುಕೊಂಡ ಬಗ್ಗೆ ವಾರ್ಷಿಕ ಅಥವಾ ಮಾಸಿಕ ಸಭೆಗಳಲ್ಲಿ ಚರ್ಚೆಯಾಗಿಲ್ಲವೇ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆರೋಪಿಯೇ ಮಾಹಿತಿ ನೀಡುತ್ತಿರಲಿಲ್ಲವೆಂದು ನುಡಿದಿರುತ್ತಾರೆ. ಮಾಸಿಕ ಫೀಯನ್ನು ಸಂಗ್ರಹಿಸುತ್ತಿದ್ದಾರೋ ಇಲ್ಲವೋ ಎಂಬ ಬಗ್ಗೆ ನಿಮಗೆ ಮಾಹಿತಿ ಇರಲಿಲ್ಲವೇ ಎಂದು ವಕೀರಲು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಮಾಹಿತಿ ಇರಲಿಲ್ಲ ನನ್ನನ್ನು ಕತ್ತಲೆಯಲ್ಲಿ ಇಟ್ಟಿದ್ದರು ಎಂದು ನುಡಿದಿರುತ್ತಾರೆ.

ವಿದ್ಯಾರ್ಥಿಗಳಿಂದ ಮಾಸಿಕ ಶುಲ್ಕ ಸಂಗ್ರಹಿಸುವಂತೆ ವ್ಯವಸ್ಥಾಪಕ ಧರ್ಮದರ್ಶಿಯಾಗಿ ನಾನು ಶಿಕ್ಷಕರಿಗೆ ನಿರ್ದೇಶನ ನೀಡುತ್ತಿರಲಿಲ್ಲ. ಸಾಕ್ಷಿಯು ಮುಂದುವರಿದು ಆರೋಪಿಯೇ ಶಿಕ್ಷಕರಿಗೆ ನಿರ್ದೇಶನ ನೀಡುತ್ತಿದ್ದರು ಎಂದು ಸ್ವಯಂ ನುಡಿಯುತ್ತಾರೆ. ಆರೋಪಿ ಆ ರೀತಿ ಶಿಕ್ಷಕರಿಗೆ ನಿರ್ದೇಶನ ನೀಡಲು ಧರ್ಮದರ್ಶಿ ಸಭೆಯಲ್ಲಿ ಠರಾವು ಪಾಸು ಮಾಡಿರುವುದಿಲ್ಲ. ಟ್ರಸ್ಟಿನ ಬೈಲಾ ಪ್ರಕಾರ ಆಡಳಿತಾತ್ಮಕ ನಿರ್ದೇಶನಗಳನ್ನು ವ್ಯವಸ್ಥಾಪಕ ಧರ್ಮದರ್ಶಿಯವರೇ ನೀಡಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಆದರೆ ಶಾಲೆಯ ಸಂಪೂರ್ಣ ನಿರ್ವಹಣೆಯನ್ನು ಮಾಡುತ್ತಿದ್ದಂತಹ ಆರೋಪಿಯೇ ಆಡಾಳಿತಾತ್ಮಕ ನಿರ್ದೇಶನಗಳನ್ನು ನೀಡುತ್ತಿದ್ದರು ಎಂದು ಸ್ವಯಂ ನುಡಿದಿರುತ್ತಾರೆ. ಮಿಳಿಂದ ವಿದ್ಯಾ ಸಂಸ್ಥೆಯಲ್ಲಿ ಪ್ರಾರಂಭದಿಂದ 2014 ರ ವರೆಗೆ ವ್ಯವಸ್ಥಾಪಕ ಧರ್ಮದರ್ಶಿಯಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ಈ ಹಂತರದಲ್ಲಿ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲಿಗಾಗಿ ಕೇಸನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ. 04.03.20

ಹಿ.ಸಿ.ನ್ಯಾ ಮತ್ತು ಪ್ರದನ್ಯಾದಂ,
ಪಿರಿಯಾಪಟ್ಟಣ.